ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

CC No : 244/2018

CW.4 PW.4

***ಹೆಸರು*** ಃ ಸೂರ್ಯ
ತಂದೆ ಃ ಧರ್ಮರ್
ವಯಸ್ಸು ಃ 19 ವರ್ಷ
ಉದ್ಯೋಗ ಃ ವ್ಯಾಪಾರ
ವಾಸ ಃ ತಟ್ಟೆಕೆರೆ, ಚನ್ನಪಟ್ಟಣ.

ಸ್ವಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದಃ ದಿಃ07.07.2022

ಆರೋಪಿತರು ನನಗೆ ಪರಿಚಯ ಇರುತ್ತಾರೆ. ದಿ.20.06.2017 ರಂದು ಸಂಜೆ 6.00 ರಿಂದ 6.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆ ಆಗ ಅರೋಪಿತರು ರಸ್ತೆಯ ಸಂಬಂಧವಾಗಿ ಅರೋಪಿತರಿಗೆ ಸಮನ್ಸ್ ನೀಡಿದ ಕಾರಣ ನಮಗೆ ಸಮನ್ಸ್ ಕಳುಹಿಸುತ್ತೀರಾ ಎಂದು ನಮ್ಮ ತಾಯಿ ತಂದೆ ಪ್ರಾಸಾ-1 ಮತ್ತು ಪ್ರಾಸಾ-2 ರವರ ಮೇಲೆ ಜಗಳಕ್ಕೆ ಬಂದಿರುತ್ತಾರೆ. 1 ನೇ ಅರೋಪಿ ಪ್ರಾಸಾ-1 ರವರಿಗೆ ಮುದ್ದೆ ಮಾಲು 1 ರ ಮೂಲಕ ಕೆನ್ನೆಯ ಮೇಲೆ ಹೊಡೆದು ರಕ್ತಗಾಯ ಪಡಿಸಿದರು. ಪ್ರಾಸಾ-2 ರವರ ಬಲಗೈ ಹೆಬ್ಬೆರಳನ್ನು ಮುದ್ದೆ ಮಾಲು 2 ರಿಂದ ಹೊಡೆದು ರಕ್ತಗಾಯ ಪಡಿಸಿರುತ್ತಾರೆ. 3 ಮತ್ತು 4 ನೇ ಅರೋಪಿಗಳು ಪ್ರಾಸಾ-3 ಮತ್ತು ನನಗೆ ಕೈಗಳಿಂದ ಕಪಾಳಕ್ಕೆ ಹೊಡೆದರು. ಆಗ ಚಾಸಾ-5 ರವರು ಜಗಳವನ್ನು ಬಿಡಿಸಿ ಪ್ರಾಸಾ-1 ಮತ್ತು 2 ರವರನ್ನು ಅಸ್ಪತ್ರೆಗೆ ಕಳುಹಿಸಿಕೊಟ್ಟರು. ನಾನು ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಪೋಲೀಸರ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿದ್ದ ಇಬ್ಬರು ಅರೋಪಿತರನ್ನು ಗುರುತಿಸಿದ್ದು ಉಳಿದ ಇಬ್ಬರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಅರೋಪಿತರು ನಮಗೆ ಕೊಲೆ ಬೆದರಿಕೆ ಹಾಕಿ ನನ್ನನ್ನು ಮತ್ತು ಪ್ರಾಸಾ-3 ರವರ ಮೇಲೆ ಗಾಡಿ ಹತ್ತಿಸಿ ಸಾಯಿಸಿ ಬಿಡುತ್ತೇವೆ ಎಂದು ಕೊಲೆ ಬಿದರಿಕೆ ಹಾಕಿದರು. ಅರೋಪಿತರು ನಮ್ಮ ಮನೆ ಒಳಗೆ ನುಗ್ಗಿ

ಇದೆನ್ನೆಲ್ಲಾ ಮಾಡಿದರು ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿತರ  ಪರಃ ಶ್ರೀ ಎಂ ಕೆ ಎನ್ ವಕೀಲರಿಂದಃ

ಫ್ರಾಸಾ-*1*, *2* ನನ್ನ ತಂದೆ ತಾಯಿ ಫ್ರಾಸಾ-*3* ನನ್ನ ಅಣ್ಣ, ಚಾಸಾ-*5* ರವರ ಬಳಿ ಎಣ್ಣೆ ಖರೀದಿ ಮಾಡುತ್ತೇವೆ ಹಾಗಾಗಿ ಅವರು  ನಮಗೆ ಪರಿಚಯಸ್ಥರು. ಚಾಸಾ-*6* ರವರು ಚಾಸಾ-*5* ರವರಿಗೆ ಪರಿಚಯಸ್ಥರು. ನಾವು ಚಕ್ಕಲಿ ವ್ಯಾಪಾರ ಮಾಡುತ್ತೇವೆ.  ನಾವು ಚಕ್ಕಲಿ ಮಾರಾಟ ಮಾಡಲು ಬೆಂಗಳೂರಿಗೆ *1.00* ಗಂಟೆ ಹೋಗಿ *4.00* ಗಂಟೆ ವಾಪಸ್ಸು ಬರುತ್ತೇವೆ.  ಬೆಂಗಳೂರಿನಲ್ಲಿ ಎರಡರಿಂದ ಮೂರು ಅಂಗಡಿಗಳಿಗೆ ಚಕ್ಕಲಿಯನ್ನು ಕೊಡುತ್ತೇವೆ.  ನಮಗೆ ಅಗ್ರಹಾರ ಮತ್ತು ಕೆ ಅರ್ ಮಾರ್ಕೇಟ್ ನಲ್ಲೂ ಸಹ ನಮ್ಮ ಗ್ರಾಹಕರಿಗೆ ಚಕ್ಕಲಿಯನ್ನು ನೀಡುತ್ತೇವೆ.  ನಮ್ಮ ಮನೆಯ ಅಕ್ಕಪಕ್ಕ ವಾಸದ ಮನೆ ಇವೆ ಎಂದರೆಸರಿ. ನಿಮ್ಮ ಮನೆ ಮುಂದೆ ದೇವಸ್ಥಾನ ಇದೆ ಎಂದರೆಸರಿ. ದೇವಸ್ಥಾನ ಪೂರ್ವದಿಂದ ಬಂದ ರಸ್ತೆ ವಿಶಾಲವಾಗಿದೆ ನಂತರ ಕವಲು ಆಗಿ ಎರಡು ಚಿಕ್ಕ ರಸ್ತೆಗಳಾಗಿ ವಿಗಂಡಣೆಯಾಗಿದೆ ಎಂದರೆ ಸರಿ.  ರಸ್ತೆ ದೇವಸ್ಥಾನ ಮತ್ತು ನಮ್ಮ ಮನೆ ಮದ್ಯ ಬರುತ್ತದೆ ಎಂದರೆ ಸರಿ.  ನಮ್ಮ ಮನೆಯನ್ನು ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಿದ್ದು ಎಂಬುದರ ವಿಚಾರವಾಗಿ ದೂರುಗಳು ಇತ್ತು ಎಂದರೆ ಸರಿ.  ಗ್ರಾಮಸ್ಥರು ನಗರಸಭೆಯವರಿಗೆ ರಸ್ತೆ ಅಗಲ ಮಾಡಲು ಅರ್ಜಿಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.  ರಸ್ತೆ ಅಗಲ ಮಾಡಿದ್ದಾರೆ ಎಂದರೆ ಸರಿ. ರಸ್ತೆ ಅಗಲ ಮಾಡಲು ನಮ್ಮ ತಕರಾರು ಇತ್ತು ಎಂದರೆ ಸರಿ.  ಗ್ರಾಮಸ್ಥರು ನೀಡಿದ ಅರ್ಜಿಯಲ್ಲಿ  ಅರೋಪಿತರು ಸಹ ಭಾಗಿಯಾಗಿದ್ದರು ಎಂದರೆ ಸರಿ. ರಸ್ತೆ ಅಗಲವಾದ ನಂತರ ಸಿವಿಲ್ ದಾವೆಯನ್ನು ದಾಖಲಿಸಿದೆವು ಎಂದರೆ ಸರಿ. ಫ್ರಾಸಾ-*1* ಮತ್ತು *2* ರವರು ಅರೋಪಿತರಿಗೆ ಯಾವಾಗ ಸಮನ್ಸ ಅನ್ನು ಕಳುಹಿಸಿದ್ದರು ಎಂದು ನನಗೆ ಗೊತ್ತಿಲ್ಲ.  ಆರೋಪಿತರು ಸುಮಾರು ಅರ್ಧ ಗಂಟೆ ಕಾಲ ಜಗಳ ಮಾಡಿದರು.  ಜೋರಾಗಿ ಮಾತನಾಡಿ ಕೂಗಾಡಿದರೆ ಅಕ್ಕಪಕ್ಕದವರಿಗೆ ಕೇಳಿಸುತ್ತದೆ ಎಂದರೆ ಸರ. ಸಂಜೆ *6.00* ರಿಂದ *6.30* ಸಮಯಲ್ಲಿ ಕೆಲೀಸಕ್ಕೆ ಹೋಗಿದಂತಹ ವ್ಯಕ್ತಿಗಳು ಆಗ ಬಂದಿರುತ್ತಾರೆ ಎಂದರೆ ಸರಿ. ಜಗಳ ಆಗುವ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಯಾರು ಬಂದಿರಲಿಲ್ಲ ನಾವು

ಸಹಾಯಕ್ಕೆ ಯಾರನ್ನು ಕರೆಯಲಿಲ್ಲ.

ನ್ಯಾಯಾಲಯದ ಸಮಯವಾದ್ದರಿಂದ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.

ಅರೋಪಿಗಳು ನಮ್ಮ ಅಕ್ಕಪಕ್ಕ ಮನೆಯವರಲ್ಲ. ಪ್ರಾಸಾ-*1* ರವರಿಗೆ ಮು ಮಾಲು *1* ರಿಂದ ಹೊಡೆದು ಕೆನ್ನೆಯ ಮೂರು ಹೊಲಿಗೆ ಹಾಕುವಷ್ಟು ರಕ್ತಗಾಯಮಾಡಿದ್ದರು. ಪ್ರಾಸಾ-*1* ರವರನ್ನು ಮು ಮಾಲು *1* ರಿಂದ ಹೊಡೆದಾಗ ರಕ್ತ ಬಟ್ಟೆ ಮತ್ತು ನೆಲದ ಮೇಲೆ ಬಿದ್ದಿತ್ತು. ನಾನು ಪ್ರಾಸಾ-*2* ಮತ್ತು *3* ರವರು ಟಿ ವಿ ನೋಡುತ್ತಿದ್ದೆವು ಪ್ರಾಸಾ-*1* ಅಡುಗೆ ಮಾಡುತ್ತಿದ್ದರು. ಆರೋಪಿಗಳು ಪ್ರಾಸಾ-*2* ರವರನ್ನು ಮನೆಯಿಂದ ಹೊರಕ್ಕೆ ಕರೆದು ಕಪಾಳಕ್ಕೆ ಹೊಡೆದಾಗ ಪ್ರಾಸಾ-*1* ರವರು ಜಗಳ ಬಿಡಿಸಲು ಹೋದಾಗ ಮು ಮಾಲು *1* ರಲ್ಲಿ ಹೊಡೆದರು. ಮೇಲೆ ಹೇಳಿದ ವಿಚಾರಗಳನ್ನು ನಾನು ನನ್ನ ಹೇಳಿಕೆಯನ್ನು ಪೋಲೀಸರ ಮುಂದೆ ನೀಡುವಾಗಲು ಸಹ ಹೇಳಿದ್ದೆ ಎಂದು ನುಡಿಯುತ್ತಾರೆ. ಪ್ರಾಸಾ-*2* ರವರಿಗೆ ಕುಯ್ಯಿದ ರಕ್ತ ಗಾಯ ಆಗಿತ್ತೇ ಎಂದರೆ ಸಾಕ್ಷಿ ಮು ಮಾಲು *2* ರಿಂದ ಹಲ್ಲೆ ಮಾಡಲು ಬಂದಾಗ ಪ್ರಾಸಾ-*2* ರವರು ಕೈಯಿಂದ ತಡೆದಾಗ ಅವರ ಬಲಗೈ ಹೆಬ್ಬೆಟ್ಟಿಗೆ ಕುಯ್ಯಿದ ಗಾಯವಾಗಿತ್ತು ಎಂದು ನುಡಿಯುತ್ತಾರೆ. ಪ್ರಾಸಾ-*2* ರವರಿಗೆ ರಕ್ತಗಾಯವಾದಾಗ ಮನೆಯಿಂದ ಹೊರಗಡೆ ರಕ್ತ ನೆಲಕ್ಕೆ ಚಲ್ಲಿತ್ತು. ಮನೆಯ ಯಾವ ಭಾಗದಲ್ಲಿ ರಕ್ತ ಕಲೆಯಾಗಿತ್ತು ಎಂದರೆ ಸಾಕ್ಷಿ ಮನೆಯ ಹೊರಗಡೆ ರಕ್ತ ಚೆಲ್ಲಿತು. ಮನೆಯ ಯಾವ ಜಾಗದಲ್ಲಿ ರಕ್ತದ ಕಲೆಯಾಗಿತ್ತು ಎಂದರೆ ಸಾಕ್ಷಿ ಹೊಸಲಿನಿಂದ ಸ್ವಲ್ಪ ಒಳಗಡೆ ಅಂದರೆ ಹಾಲ್ ನಲ್ಲಿ ರಕ್ತ ಕಲೆಯಾಗಿತ್ತು. ಸದರಿ ವಿಚಾರವನ್ನು ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡುವಾಗ ಹೇಳಿದ್ದೇನೆ. *3* ಮತ್ತು *4* ನೇ ಅರೋಪಿ ಪ್ರಾಸಾ-*3* ಮತ್ತು ನನಗೆ ಕಪಾಳಕ್ಕೆ ಹೊಡೆದ ವಿಚಾರವಾಗಿ ಚಿಕಿತ್ಸೆ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ನೋಟೀಸ್ ನೀಡಿದ್ದರೆ ಎಂದರೆ ಸಾಕ್ಷಿ ಜಗಳವಾದ ದಿನ ದೂರು ನೀಡಲು ಪೋಲೀಸ್ ಠಾಣೆಗೆ ಹೋಗಿದ್ದೆವು ನಂತರ ನಾವು ಪೋಲೀಸ ಠಾಣೆಗೆ ಹೋಗಿರುವುದಿಲ್ಲ. ಘಟನೆಯ

ನಂತರ ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಪ್ರಾಸಾ-*1* ರವರ ರಕ್ತ ಕಲೆಯಾದ ಬಟ್ಟೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ. ಮು ಮಾಲು *1* ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ನಮ್ಮ ಮನೆಯ ಮುಂದೆ ಪಾಳು ಬಿದ್ದಿರುವ ಮನೆ ಇದೆ ಮು ಮಾಲು *2* ಸಹ ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲೂ ಇರುತ್ತದೆ ಎಂದರೆ ಸರಿ. ಮು ಮಾಲು *1* ಮತ್ತು *2* ನ್ನು ನಾವೇ ಪೋಲೀಸರಿಗೆ ನೀಡಿದ್ದೇವೆ ಎಂದರೆ ಸರಿ. ನಾು ಮನೆಕಟ್ಟಬೇಕಾಗಿದ್ದ ನಿವೇಶನದಲ್ಲಿ ರಸ್ತೆ ನಿರ್ಮಿಸಲು ಜಾಗವನ್ನು ಬಿಡಿಸಲು ಆರೋಪಿಗಳೇ ಕಾರಣ ಅದ್ದರಿಂದ ಅವರ ಮೇಲೆ ದೂರನ್ನು ನೀಡಿದ್ದೇವೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ನಿವೇಶನದಲ್ಲಿ ರಸ್ತೆ ನಿರ್ಮಿಸಲು ಜಾಗ ಕೊಟ್ಟ ಕಾರಣ ದ್ವೇಷಕ್ಕಾಗಿ ಪ್ರಾಸಾ-*1* ರಿಂದ *3* ಮತ್ತು ನಾನು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-*1* ಮತ್ತು *2* ರವರಿಗೆ ಆರೋಪಿಗಳ ಮೇಲಿನ ದ್ವೇಷಕ್ಕಾಗಿ ಅವರ ಹೇಳಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆಯುವ ಸಮಯದಲ್ಲಿ ಇರಲಿಲ್ಲ, ಯಾವುದೇ ಘಟನೆ ನೋಡಿಲ್ಲ ಮತ್ತು ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.